ಸ್ಯ 1895—96ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 293.

ವೈತಪಟ್ಟ ಹಾಜಿ ಷೇಕ್‌ಅಹಮದ್‌ಸಾಹೆಬರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಬೆಂಗಳೂರು ದೊಡ್ಡಪ್ಯಾಟೆಯಲ್ಲಿ ಇರುವ ಮಹಮ್ಮದ್ ಅಬ್ದುಲ್ಲಾಸಾಬಿ ಮತ್ತು ಅಬ್ದುಲ್ ರಹೀಂಸಾಬಿಯು ವೈತಪಟ್ಟ ಸದರೀ ಹಾಜಿ ಷೇಕ್‌ಅಹಮ್ಮದ್‌ಸಾಬರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ದೊಡ್ಡಪೇಟೆ ಸ್ಥಳದ ಮಹಮ್ಮದ್ ಅಬ್ದುಲ್ಲಾಸಾಬಿ ಮತ್ತು ಅಬ್ದುಲ್ ರಹೀಂಸಾಬಿಯು ಡಿಟೋ ವಾಸಸ್ಥರಾಗಿ ವೈತಪಟ್ಟ ಹಾಜಿ ಷೇಕ್ ಅಹಮ್ಮದ್‌ಸಾಹೆಬರ ಜೀಂದಗಿ ಬಗ್ಗಾಗಿ ಬರತಕ್ಕ ಸೂಲವನ್ನು ವಸೂಲ್ಮಾಡುವದಕ್ಕೆ ಸ್ಯ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬ್ಯಗ್ಗೆ ಈ ಕೋರ್ಟ್‌ಗೆ ಟಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮಹಮ್ಮದ್ ಅಬ್ದುಲ್ಲಾಸಾಬಿ ಮತ್ತು ಅಬ್ದುಲ್‌ರಹೀಂಸಾಬಿಯ ಅರ್ಜಿಯನ್ನು ಸ್ಯ 1896ನೇ ಇಸವಿ ಮಾರ್ಚ್ ತಿಂಗಳ ತಾರೀಖು 11ರಲ್ಲು ಕೇಳಿ ಸರಟಫಿಕೇಟ್ ಪಡೆಯತಕ್ಕ ಬಾಧ್ಯತೆಯು ವಿಮರ್ಶೆಮಾಡಲ್ಪಡುತ್ತೆ. ಆಕಾಲದಲ್ಲಿ ಸದರೀ ವೈತಪಟ್ಟ ಹಾಜಿ ಷೇಕ್‌ಅಹಮ್ಮದ್‌ಸಾಬರ ಆಸ್ತಿಗೆ ಹಕ್ಕುದಾರರಾದ ವಿಶ್ವರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಯ 1896ನೇ ಇಸವಿ ಜನವರಿ ತಿಂಗಳ 31ನೇ ತಾರೀಖಿನಲ್ಲಿ ಕೋರ್ಟ್ ಮೊಹರ್ ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

ಕೋಲಾರ ಡಿಸ್ಟ್ರಿಕ್ಟ್.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧ ಪತ್ರಿಕೆ.

ತಾರೀಖು 4ನೇ ಫಿಬ್ರವರಿ 1896.

1. ಕಾಯಂಗುತ್ತಾ ಬಾಕಿದಾರರಾದ ಅಂಗತಟ್ಟ್ ಗ್ರಾಮದ ಹನುಮಂತರಾಯುಂದ ಬರಬೇಕಾದ ಜರ್ಮಾನೆ ಕಂದಾಯದ ಬಾಕಿಗಾಗಿ ಪಿಡುವಳಿ ಹಕ್ಕು ತಪ್ಪಿ ಹೋಗಿದೆ ಯಂದು ಪ್ರಕಟಿಸಲ್ಪಟ್ಟಿರುವ ಇದರಡಿ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟ್ ಶಿಡ್ಲಘಟ್ಟ ತಾಲ್ಲೂಕು ಕಛೇರಿಯಲ್ಲಿ 1896ನೇ ಇಸವಿ ಮಾರ್ಚಿ 18ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟು ಇದೆ.

ಹರಾಜು ಆ ದಿವಸ ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1894—95ನೇ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಪೀಲ್ ಮೇರಿಗೆ 1137—11—0 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಶೇಕಡಾ 25 ರೂಪಾಯಿಯನ್ನು ಡಿಪಾಜಿಟ್ ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ ಮೊಬಲಗನ್ನು ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಹ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ವಿಜಂಟ್ ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲ್‌ಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕಿದಾರನಾಗಲಿ ಅತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮ್ಮಿಷನರವರಿಂದ ಮುಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜು ಮೊಬಲಗನ್ನ ಪೂರ್ತಿಯಾಗಿ ಪಾವತಿಮಾಡಿದ ಮೇಲೆ ಡೆಪ್ಯುಟಿ ಕಮ್ಮಿಷನರವರಿಂದ ಹರಾಜು ಮುಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮ್ಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಕಾಲಿತ್ಯಗಳಿಗೆ ಗವರ್ಮೆಂಟಿನವರು ಜವಾಬ್ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಆಂಥಾ ಅಪ್ಪೀಲಿನಲ್ಲಿ ಆಗುವ ಫೈನಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕಿದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜು ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಮುಟ್ಟಿಗೆ ಬರೀ ಅಥವಾ ಬಾಗಾಯತು.	ವಿಸ್ತೀರ್ಣ.	ಪ್ರಕಾರ.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ಸ್ಟ್ಯಾಂಪ್ ಸಂಬಂಧವಾದ ಬಾಕಿ ಹೊಣೆಗಳು.
1.	2	3	4.	5	6	7	8	9	10	11
					ರೂ. ಆ. ಪೈ.			ಎಕರೆ. ಗುಂಟೆ.	ರೂ. ಆ. ಪೈ.	ರೂ. ಆ. ಪೈ.
ಬಿಡ ಪಟ್ಟು	ಜಂಗಮಕೋಟೆ	ಕಾಯಂಗುತ್ತಾ	ಅಂಗಡಪ್ಪ ಹನುಮಂತರಾಯರು	..	..	ಸೊರಾ ಗ್ರಾಮ.	ಖುಷ್ಕೀ	302 28	516 8 0	
							ಬಾಗಾಯತು	18 28	106 0 0	
							ಸಾಗುವಳೀ ನಾಲಾಯಖು	92 14	1 8 0	
								413 30	624 0 0	
							ಸಾಲಿಯಾನಾಕೊಡತಕ್ಕ ಮೊಬಲಗು	.. ..	375 15 7	1137 11 0

ಪರಾ.—ಜೋಡೀದಾರ್‌ರಿಂದಾಗಲಿ ಬಾಧ್ಯತೇ ಮೂಲಕ ಇವರುಗಳಿಗೆ ಹಿಂದೆ ಇದ್ದ ವರಿಂದಲಾಗಲಿ ಪುಂಟುಮಾಡಲ್ಪಟ್ಟ ತಮ್ಮಾಂ ಹಿಡುವಳಿಗಾಗಲಿ ದೇಣಿಗಾಗಲಿ ಮತ್ತು ಹಕ್ಕುಗಳಿಗಾಗಲಿ ಅಥವಾ ಮತ್ಯಾವ ಸಂಬಂಧಗಳಿಗಾಗಲಿ ಸದರೀ ಹರಾಜು ವಳಪಟ್ಟಿರುವದಿಲ್ಲ.

ಸಿ. ಮಾದೆಯ್ಯ,
ಡೆಪ್ಯೂಟಿ ಕಮ್ಮಿಷನರ್.

ತಾರೀಖು 6—8ನೇ ಫಿಬ್ರವರಿ 1896ನೇ ಇಸವಿ.

ಇದರಿಂದ ತಿಳಿಯಪಡಿಸುವದೇನೆಂದರೆ,—ಈ ಕೆಳಗೆ ನಮೂದಿಸುವ ಸಬ್ ರಿಜಸ್ಟ್ರಾರ್ ಆಫೀಸಿನಲ್ಲಿ ಜೇವಾರಸಾಗಿರುವ ದಸ್ತೈವಜುನ್ನ ಕ್ರಮವಾದ ವಾರಸಿದಾರನಾಗಲಿ ಅಥವಾ ಅವನಿಂದ ಕ್ರಮವಾದ ಅಧಿಕಾರ ಪಡದುಕೊಂಡ ಮುತಾಲೀಕನಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳ ವಳಗಾಗಿ ಆ ಸಬ್ ರಿಜಸ್ಟ್ರಾರ್ ಮುಂದೆ ಹಾಜರಾಗಿ ವಾಪಸ್ ತೆಗದುಕೊಂಡು ಹೋಗಬಹುದು. ಇಲ್ಲವಾದರೆ ಇಂಡಿಯನ್ ರಿಜಸ್ಟ್ರೇಷನ್ ಆಕ್ಟ್ 85ನೇ ಸೆಕ್ಷನ್ ಪ್ರಕಾರ ಅದನ್ನು ನಾಶಪಡಿಸಲ್ಪಡಿತು.

ದಸ್ತಾವೇಜಿನ ನಂಬರ್.	ದಸ್ತಾವೇಜು ಬರದುಕೊಟ್ಟವರ ಹೆಸರು ಮತ್ತು ಅಡ್ಡ ಹೆಸರು ವಾಸಸ್ಥಾನ ವಗೈರೆ.	ದಸ್ತಾವೇಜು ಬರೆಸಿಕೊಂಡವರ ಹೆಸರು ಮತ್ತು ಅಡ್ಡ ಹೆಸರು ವಾಸಸ್ಥಾನ ವಗೈರೆ.	ದಸ್ತಾವೇಜಿನ ತಾರೀಖು.	ರಿಜಸ್ಟ್ರಿದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
107 1893—94	ಚಿಕ್ಕಬಳ್ಳಾಪುರದಲ್ಲಿರುವ ತೆನಗುಬಣಜಿಗ ಗುಂಡಪ್ಪನ ಮಗ ಮಲ್ಲೆಲು ವೆಂಕಟರಮಣಪ್ಪನ ಮಗ ಚಿಕ್ಕಕೊಂಪ್ಪನು ಕೊಪ್ಪ	ಚಿಕ್ಕಬಳ್ಳಾಪುರದಲ್ಲಿರುವ ತೆನಗುಬಣಜಿಗ ಹುಬ್ಬಿನ ಆಪ್ಪನು ಮಗ ಚಿಕ್ಕ ಅಪ್ಪನು	1893ನೇ ಇಸವಿ ಜೂನ್ ತಾರೀಖು 20	1893ನೇ ಇಸವಿ ಸೆಪ್ಟಂಬರ್ ತಾರೀಖು 19	ಶಿಡ್ಲಘಟ್ಟದ ತಾಲ್ಲೂಕು ಸಾದಲಿ ಹೋಬಳಿ ಗುಂಡಹಳ್ಳಿ ಗ್ರಾಮದ ಬಳಿ ಇರುವ ಜಮೀನುಗಳು ಮತ್ತು ಮನೆ ಸಹ 100 ರೂಪಾಯಿಗೆ ಕ್ರಯ.

ಸಿ. ಮಾದಯ್ಯ,
ರಿಜಸ್ಟ್ರಾರ್.